ದುರ್ಬಲ ವರ್ಗದ ಕಸುಬುದಾರರಿಗೆ ಸಾಮಾನ್ಯ ರೀತಿಯಲ್ಲಿಯೇ ಹಣಕಾಸಿನ ನೆರವನ್ನು ನೀಡಲಾಗುತ್ತಿದೆ. ಸಾಮಾನ್ಯವಾಗಿ ದುರ್ಬಲವರ್ಗದ ಕಸುಬುದಾರರು ಬೆತ್ತ ಮತ್ತು ಬಿದಿರು ಉದ್ದಿಮೆ, ಕಮ್ಮಾರಿಕೆ, ಚರ್ಮೋದ್ಯೋಗ, ನಾರು, ನೀರಾ ಮತ್ತು ಪನಬೆಲ್ಲ, ಈ ಉದ್ದಿಮೆಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ನಿರತರಾಗಿರುತ್ತಾರೆ. ಖಾದಿ ಮಂಡಳಿಯು ಬರಗಾಲ ಪೀಡಿತ ಬಿಜಾಪುರ ಗುಲ್ಬರ್ಗ, ಚಿತ್ರದುರ್ಗ ಜಿಲ್ಲೆಗಳಲ್ಲಿ 1982ರಿಂದಲೂ ವಿಶೇಷ ಕಾರ್ಯಕ್ರಮವನ್ನು (ರಾಜ್ಯ ಸರ್ಕಾರದ ಐ.ಆರ್.ಡಿ.ಪಿ. ಮತ್ತು ಟ್ರೈಸಂ ಕಾರ್ಯಕ್ರಮಗಳನ್ನೊಳಗೊಂಡ) ಹಾಕಿಕೊಂಡು ಇದುವರೆಗೆ 7,502 ಮಂದಿ ಬಡತನ ರೇಖೆಯ ಅಡಿಯಲ್ಲಿರುವ ಕಸುಬುದಾರರಿಗೆ ಉದ್ಯೋಗಾವಕಾಶ ಕಲ್ಪಿಸಿದೆ.

8ನೇ ಪಂಚವಾರ್ಷಿಕ ಯೋಜನೆಯಡಿಯಲ್ಲಿ ಚಿತ್ರದುರ್ಗ, ಬೀದರ್, ಗುಲ್ಬರ್ಗ ಮತ್ತು ಬಿಜಾಪುರ ಜಿಲೆಗಳ ಅಲ್ಪಸಂಖ್ಯಾತರ ಉದ್ಧಾರಕ್ಕಾಗಿ ಮಂಡಲಿಯು ಕಾರ್ಯಕ್ರಮವೊಂದನ್ನು ಯೋಜಿಸಿದೆ.

ಇ) ದುರ್ಬಲವರ್ಗದ ಕಸಬುದಾರರಿಗೆ ನೀಡಲಾದ ಆರ್ಥಿಕ ನೆರವಿನ ಬಗ್ಗೆ ಪ್ರತ್ಯೇಕ ಅಂಕಿ ಅಂಶಗಳನ್ನು ಇಡಲಾಗಿಲ್ಲ.

ಈ) ರಾಜ್ಯ ಸರ್ಕಾರವು ಖಾದಿ ಮಂಡಲಿಯ ಸಿಬ್ಬಂದಿ ವೆಚ್ಚವನ್ನು ಭರಿಸುವುದು. ಕಳೆದ ಮೂರು ವರ್ಷಗಳಿಂದ ಮಂಡಲಿಯು ಮಾಡಿರುವ ವೆಚ್ಚದ ವಿವರವು ಈ ರೀತಿ ಇದೆ:–

1987-88	ರೂ.157.33 ಲಕ್ಷಗಳು
1988-89	ರೂ.163.77 ಲಕ್ಷಗಳು
1989-90	ರೂ.215.36 ಲಕ್ಷಗಳು.

ಪರಿಶಿಷ್ಟ ಜಾತಿ : ಪರಿಶಿಷ್ಟ ವರ್ಗದವರ ಅಭಿವೃದ್ಧಿಗಾಗಿ ಚೆನ್ನಪಟ್ಟಣ ತಾಲ್ಲೂಕಿನಲ್ಲಿ ಹಮ್ಮಿಕೊಂಡಿರುವ ಯೋಜನೆಗಳು.

1697 ಶ್ರೀ ಸಾದತ್ ಆಲಿ ಖಾನ್ (ಚನ್ನಪಟ್ಟಣ):- ಮಾನ್ಯ ಯೋಜನಾ, ಕಾನೂನು, ಸಂಸದೀಯ ವ್ಯವಹಾರಗಳ ಮತ್ತು ಪ್ರವಾಸೋದ್ಯಮ ಸಚಿವರು (ಸಮಾಜ ಕಲ್ಯಾಣ ಗಣಿ ಮತ್ತು ಭೂವಿಜ್ಞಾನ ಸಚಿವರ ಪರವಾಗಿ) ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಎ) ಚನ್ನಪಟ್ಟಣ ತಾಲ್ಲೂಕಿನಲ್ಲಿ ಪರಿಶಿಷ್ಟ ಜಾತಿ : ಪರಿಶಿಷ್ಟ ವರ್ಗದ ಅಭಿವೃದ್ಧಿಗೆ ವಿವಿಧ ಇಲಾಖೆಗಳಿಂದ ಯೋಜಿಸಲ್ಪಟ್ಟ ಕಾರ್ಯಕ್ರಮಗಳಿಗೆ ಸದರಿ ಯೋಜನೆಯಲ್ಲಿ ಚನ್ನಪಟ್ಟಣ ತಾಲ್ಲೂಕಿನಲ್ಲಿ ಖರ್ಚು ಮಾಡಿರುವ ಹಣವೆಷ್ಟು? (1989-90ನೇ ವರ್ಷ)

ಬಿ) ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮವು ವಿಶೇಷ ಘಟಕ ಯೋಜನೆಯಡಿ 1989-90ನೇ ಸಾಲಿನಲ್ಲಿ ಎಷ್ಟು ನೀರಾವರಿ ಕೊಳವೆ ಬಾವಿಗಳನ್ನು ಕೊರೆದಿದೆ?

ಸಿ) ಕೊರೆದಿರುವ ಬಾವಿಗಳ ಪೈಕಿ ಎಷ್ಟು ಕೊಳವೆ ಬಾವಿಗಳು ಕೆಲಸ ನಿರ್ವಹಿಸುತ್ತಿವೆ? ಎಷ್ಟು ರಿಪೇರಿಯಲ್ಲಿವೆ? ಎಷ್ಟು ಕೊಳವೆ ಬಾವಿಗಳು ಪ್ರಾರ್ಥಾ ಕೆಟ್ಟಿವೆ?

ಡಿ) ಈ ಬಗ್ಗೆ ಸರ್ಕಾರ ತೆಗೆದುಕೊಳ್ಳುವ ಕ್ರಮವೇನು?

ಶ್ರೀ ಎಂ.ವೀರಪ್ಪ ಮೊಯ್ಲಿ (ಯೋಜನಾ, ಕಾನೂನು, ಸಂಸದೀಯ ವ್ಯವಹಾರಗಳ ಮತ್ತು ಪ್ರವಾಸೋದ್ಯಮ ಸಚಿವರು) (ಸಮಾಜ ಕಲ್ಯಾಣ, ಗಣಿ ಮತ್ತು ಭೂ ವಿಜ್ಞಾನ ಸಚಿವರ ಪರವಾಗಿ):-

ಎ) ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ವರ್ಗಗಳ ಅಭಿವೃದ್ಧಿಗಾಗಿ ವಿವಿಧ ಇಲಾಖೆಗಳ ಚನ್ನಪಟ್ಟಣ ತಾಲ್ಲೂಕಿನಲ್ಲಿ 1989-90ನೇ ಸಾಲಿಗೆ ಹಮ್ಮಿಕೊಂಡಿರುವ ಕಾರ್ಯಕ್ರಮಗಳ ವಿವರಗಳನ್ನು ಅನುಬಂಧದಲ್ಲಿ ಕೊಡಲಾಗಿದೆ.

ಬಿ) ಕರ್ನಾಟಕ ಪರಿಶಿಷ್ಟ ಜಾತಿ : ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮವು ವಿಶೇಷ ಘಟಕ ಯೋಜನೆಯಡಿಯಲ್ಲಿ 1989-90ನೇ ಸಾಲಿಗೆ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಕೊಳವೆ ಬಾವಿ ಕೊರೆದಿರುವುದಿಲ್ಲ

ಸಿ) ಉಪ ಪ್ರಶ್ನೆ "ಆ" ಕ್ಕೆ ಕೊಟ್ಟಿರುವ ಉತ್ತರದಿಂದಾಗಿ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಡಿ) ಆದೇ.

ಅನುಬಂಧ

1989-90ನೇ ಸಾಲಿನಲ್ಲಿ ವಿಶೇಷ ಘಟಕ ಯೋಜನೆಯನ್ವಯ ಚನ್ನಪಟ್ಟಣ ತಾಲ್ಲೂಕಿನಲ್ಲಿ ಪರಿಶಿಷ್ಟ ಜಾತಿ : ಪರಿಶಿಷ್ಟ ಪಂಗಡದ ಪ್ರಯೋಜನದಾರರಿಗೆ ವಿವಿಧ ಇಲಾಖೆಗಳಲ್ಲಿ ಒದಗಿಸಿರುವ ಸೌಲತ್ತುಗಳ ವಿವರಗಳು.

ಕ್ರಸಂ	ಇಲಾಖೆ ಮತ್ತು ಯೋಜನೆಯ ವಿವರಗಳು	ಗುರಿ (ಆರ್ಥಿಕ)	ಸಾಧನೆ (ಆರ್ಥಿಕ)
	ವ್ಯವಸಾಯ ಇಲಾಖೆ	ರೂ.	ರೂ
1.	ಕೃಷಿ ಸಾಮಗ್ರಿಗಳ ವಿತರಣೆಯಲ್ಲಿ ರಸಗೊಬ್ಬರ ವಿತರಣೆ ಆಧುನಿಕ	20000	19896
2.	ಕೃಷಿ ಉಪಕರಣಗಳ ವಿತರಣೆ	13000	12925
3.	ಎತ್ತು ಗಾಡಿಗಳನ್ನು ಒದಗಿಸುವುದು	19200	19200
	ಮೀನುಗಾರಿಕೆ ಇಲಾಖೆ		
1.	ನೀಲಸಂದ್ರ ಗ್ರಾಮ (ತರಬೇತಿಕೊಡಲು – 250-00 ಪ್ರತಿ ತಿಂಗಳಿಗೆ)	3000	3000
2.	ನೀಲಸಂದ್ರ, ಸಹಾಯಧನ ಬಿಡುಗಡೆ	8400	8400
	ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ		
1.	ಆರಗು ಮತ್ತು ಬಣ್ಣದ ತರಬೇತಿ	18000	18000
2.	ಮರಗೆಲಸದ ತರಬೇತಿ	13500	13500
3.	ತೆಂಗಿನನಾರಿನ ತರಬೇತಿ	33000	33000
4.	ಹೊಲಿಗೆ ತರಬೇತಿ	13500	13500
5.	ಕಚ್ಚಾವಸ್ತುಗಳ ಖರೀದಿ	127500	127500
6.	ಸ್ವಂತ ಉದ್ಯೋಗಕ್ಕೆ ಸಹಾಯಧನ ಸಾಲ ಮಂಜೂರಾತಿ (ಶೇ : 25 ಸ.ಧನ)	90000	90000
	ಪಶುಸಂಗೋಪನೆ ಇಲಾಖೆ		
1.	ಮೈಲನಾಯ್ಕನ ಹೊಸಹಳ್ಳಿ	14700	14700
2.	ದೊಡ್ಡಮಳೂರು	14700	14700
3.	ಬ್ರಹ್ಮಣೀಪುರ	14700	14700

ಕ್ರಸಂ ಇಲಾಖೆ ಮತ್ತು ಯೋಜನೆಯ ವಿವರಗಳು	ಗುರಿ (ಆರ್ಥಿಕ)	ಸಾಧನೆ (ಆರ್ಥಿಕ)
ಕ್ಷೇತ್ರಾಭಿವೃದ್ಧಿ ಅಧಿಕಾರಿಗಳ ಕಛೇರಿ		
1. ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆ	189977	189977
2. ಪುಡ್ರೋ ಯೋಜನೆ	341000	134500
3. ಆಕ್ಷರ ಸೇನೆ	27000	27000
4. ವಿಶೇಷ ಘಟಕ ಯೋಜನೆ		
(1) ಎತ್ತುಗಾಡಿಗಳು	14400	14400
(2) ಕೊಳವೆ ಬಾವಿಗಳು	1050000	810000
5. ಗೃಹ ಕಲ್ಯಾಣ ಯೋಜನೆ	1000	2250
ತೋಟಕಾರಿಕೆ ಇಲಾಖೆ	ರೂ	ರೂ.
1. ತೆಂಗು	19000	19000
2. ಮಾವು	2000	2000
ರೇಷ್ಮೆ ಇಲಾಖೆ		
1. ಸಮುದಾಯ ಅಭಿವೃದ್ಧಿ ಕೇಂದ್ರ ದೇವರಹೊಸಹಳ್ಳಿ	57000	47198
2. ನೀರಾವರಿ ಬಾವಿ, ಹಾರೋಕೊಪ್ಪ	80000	75000
3. ಹೊಸದಾಗಿ ಹಿಪ್ಪನೇರಳೆ ಕಡ್ಡಿ ನೆಟ್ಟವರಿಗೆ ಸಹಾಯಧನ	20000	20350
4. ಪ್ಯಾಕೇಟ್ ಬಿನಿಫಿಟ್	12000	12568

ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿ

1. ಎಸ್.ಸಿ.ಪಿ. ಕೊಳವೆ ಬಾವಿ — 35 ವಿದ್ಯುತ್ ಒದಗಿಸಿದೆ.
2. ಎಸ್.ಸಿ ಮತ್ತು ಎಸ್.ಟಿ — 16 ವಿದ್ಯುತ್ ಒದಗಿಸಿದೆ.
3. ಶೇ: 18 — 229 ವಿದ್ಯುತ್ ಒದಗಿಸಿದೆ 112987 (493.39 ಒಬ್ಬ ಫಲಾನುಭವಿಗೆ)

ವಿದ್ಯಾ ಇಲಾಖೆ (ವಿದ್ಯಾರ್ಥಿಗಳ ಸಂಖ್ಯೆ)	ಎಸ್.ಸಿ.	ಎಸ್.ಟಿ.	ಒಟ್ಟು
1. ಸಮವಸ್ತ್ರ ವಿತರಣೆ	6731	147	6878
2. ಪಠ್ಯಪುಸ್ತಕ	6731	147	6878
3. ಮಧ್ಯಾಹ್ನದ ಉಪಹಾರ	2240	35	2275

ಪರಿಶಿಷ್ಟ ಜಾತಿ : ಪರಿಶಿಷ್ಟ ಪಂಗಡದ ಅಭಿವೃದ್ಧಿ ನಿಗಮ	ಫಲಾನುಭವಿಗಳು	ರೂ.
ಮಾರ್ಜಿನ್ ಮನಿ ಸ್ಕೀಮ್	138	24,750-00 ಮಾರ್ಜಿನ್ ಮನಿ 1,71,490-00 ಸಬ್ಸಿಡಿ